OS 10/2022
PW-01

<u>ದಿನಾಂಕಃ 04-12-2025.</u>

**<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟಿ ಸವಾಲುಃ ಶ್ರೀ RMH ಮಾನ್ಯ ವಕೀಲರಿಂದ 5 ಮತ್ತು 6 ನೇ ಪ್ರತಿವಾದಿ ಪರವಾಗಿ</u>**

ನಾವು ಪ್ರಸ್ತುತ ದಾವೆಯನ್ನು ಒಂದು ಮನೆ ಹಾಗೂ 9 ಎಕರೆ ಜಮೀನಿನ ಮೇಲೆ ಸಲ್ಲಿಸಿರುತ್ತೇವೆ. ಸದರಿ ದಾವಾ ಸ್ವತ್ತುಗಳು ಶಿವನೂರು ಗ್ರಾಮದಲ್ಲಿರುತ್ತವೆ. ದಾವಾ ಸ್ವತ್ತುಗಳು ಈ ಮೊದಲು ನನ್ನ ತಾಯಿ ಹೆಸರಿಲ್ಲಿದ್ದು ಈಗ ನನ್ನ ಅಣ್ಣ ಶ್ರೀ ಭೀಮಣ್ಣ ಇವರ ಹೆಸರಿಲ್ಲಿರುತ್ತವೆ. ನನ್ನ ತಾಯಿಯ ಹೆಸರು ಶ್ರೀಮತಿ ಮಲ್ಲಮ್ಮ. ಸದರಿ ಭೀಮಣ್ಣ ಇವರು ನನ್ನ ಅಣ್ಣ ಹಾಗೂ ಸದರಿ ಮಲ್ಲಮ್ಮ ಇವರು ನನ್ನ ತಾಯಿ ಎಂದು ರುಜುವಾತುಪಡಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದು ಹೇಳುತ್ತಾರೆ. 2 ಮತ್ತು 2 ನೇ ವಾದಿಗಳು ಶಿವನೂರು ಗ್ರಾಮದವಾಗಿರುತ್ತಾರೆ ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ನನಗೆ ತಂದೆ ಇಲ್ಲ ಎಂದರೆ ಸರಿ. ನನ್ನ ತಾಯಿ ದೇವದಾಸಿ ಎಂದರೆ ಸರಿಯಲ್ಲ. ನನ್ನ ತಂದೆ ಯಾರು ಎಂದು ತೋರಿಸಲು ನನ್ನ ಹತ್ತಿರ ಯಾವುದೇ ದಾಖಲೆಗಳು ಇರುವುದಿಲ್ಲ ಹಾಗೂ ನಾನು ಅದಕ್ಕಾಗಿ ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ ಎಂದರೆ ಸರಿ.

2. ಸದರಿ 9 ಎಕರೆ ಜಮೀನಿನ ಸ.ನಂ.24 ಆಗಿರುತ್ತದೆ. ಮೂತಲಹ ಸದರಿ 9 ಎಕರೆ ಜಮೀನು ಭೀಮಣ್ಣ ತಾಯಿ ಮಲ್ಲಮ್ಮ ಇವರ ಹೆಸರಿಲ್ಲಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನು ತಮ್ಮ ತಾಯಿಯ ಹೆಸರಿನಲ್ಲಿತ್ತು ಎಂದು ಹೇಳುತ್ತಾರೆ. ಸದರಿ ಮಲಮ್ಮ ಇವರಿಗೆ ಸದರಿ ಸ್ವತ್ತು ತಮ್ಮ ತಂದೆ ತಾಯಿಗಳಿಂದ ಬಂದಿರುತ್ತದೆ. ಸದರಿ ಮಲ್ಲಮ್ಮ ಇವರು ಸದರಿ ಸ್ವತ್ತನ್ನು ತಮ್ಮ ತಂದೆ ತಾಯಿಯಿಂದ ಪಡೆದುಕೊಂಡಿರುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ಪ್ರಸ್ತುತ ಪ್ರಕರಣದಲ್ಲಿ ಸಲ್ಲಿಸಿರುತ್ತೇನೆ.

3. ಸದರಿ ಸ್ವತ್ತು ನಮ್ಮ ತಾಯಿಯವರು ತೀರಿಕೊಂಡ ನಂತರ ನನ್ನ ಸದರಿ ಅಣ್ಣ ಭೀಮಣ್ಣ ಇವರ ಹೆಸರಿನಲ್ಲಿ ಆಗಿರುತ್ತದೆ. ಸದರಿ ಭೀಮಣ್ಣ ಇವರ ಹೆಸರಿನಲ್ಲಿ ಸದರಿ ಸ್ವತ್ತು ನಾನು ಚಿಕ್ಕವಳಿದ್ದಾಗ ಆಗಿರುತ್ತದೆ.

4. ಈಗ್ಗೆ 6-7 ತಿಂಗಳ ಹಿಂದೆ ಸದರಿ ಭೀಮಣ್ಣ ಇವರು ಸದರಿ 9 ಎಕರೆಯಲ್ಲಿ 4 ಎಕರೆ ಜಮೀನನ್ನು 5 ನೇ ಪ್ರತಿವಾದಿಯ ಮಾರಾಟ ಮಾಡಿದ್ದರ ಬಗ್ಗೆ ನನಗೆ ತಿಳಿದು ಬಂದಿರುತ್ತದೆ. ಸನ್ 2004 ರಲ್ಲಿ ಸದರಿ ಭೀಮಣ್ಣ ಇವರು ಸದರಿ 4 ಎಕರೆ ಜಮೀನನ್ನು 5 ನೇ ಪ್ರತಿವಾದಿಗೆ ರೂ.1,13,000/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮಾರಾಟವಾದ ನಂತರ ಸದರಿ 4 ಎಕರೆ ಜಮೀನು 5 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. 5 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ ಸದರಿ 4 ಎಕರೆ ಜಮೀನನ್ನು ಮಾರಾಟ ಮಾಡಿದ್ದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. 5 ನೇ ಪ್ರತಿವಾದಿಯಿಂದ 6 ನೇ ಪ್ರತಿವಾದಿಯ ಹೆಸರಿಗೆ ಸದರಿ 4 ಎಕರೆ ಜಮೀನು ವರ್ಗಾವಣೆಯಾಗಿದ್ದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರಸ್ತುತವಾಗಿ ಸದರಿ 4 ಎಕರೆ ಜಮೀನಿಗಾದಂತೆ 6 ನೇ ಪ್ರತಿವಾದಿಯ ಹೆಸರು ಪಹಣಿಗಳಲ್ಲಿ ನಮೂದಾಗಿದ್ದು ಅವರು ಸದರಿ ಜಮೀನಿನ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

5. ಸದರಿ 9 ಎಕರೆ ಜಮೀನಿನಲ್ಲಿ ಸನ್ 2020 ರಲ್ಲಿ ಸದರಿ ಭೀಮಣ್ಣ ಇವರು 01 ಎಕರೆಯನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಭೀಮಣ್ಣ ಇವರು 6 ನೇ ಪ್ರತಿವಾದಿಗೆ ಸದರಿ ಜಮೀನನ್ನು ರೂ.2,89,000/- ಗಳಿಗೆ ಮಾರಾಟ ಮಾಡಿದ್ದು, ಈಗ 6 ನೇ ಪ್ರತಿವಾದಿ ಸದರಿ ಜಮೀನಿನ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ 9 ಎಕರೆ ಜಮೀನಿಗಾದಂತೆ ಯಾವ ಯಾವ ವರ್ಷ ಯಾರು ಯಾರು ಅದರ ಸ್ವಾಧೀನಾನುಭವದಲ್ಲಿರುತ್ತಾರೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದು ಹೇಳಿದ್ದಕ್ಕೆ ಸಾಕ್ಷಿ ತಾವೇ ಇರುವುದಾಗಿ ಹೇಳುತ್ತಾರೆ. ಸದರಿ ಜಮೀನಿನ ಸ್ವಾಧೀನಾನುಭವದಲ್ಲಿ ನಾವು

ವಾದಿಗಳು ಇರುತ್ತೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಜಮೀನಿಗೆ ನಾವು ಕರವನ್ನು ಕಟ್ಟಿರುತ್ತೇವೆ ಎಂದು ತೋರಿಸಲು ಅವುಗಳನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಸದರಿ 9 ಎಕರೆ ಜಮೀನನ್ನು ಯಾವುದೇ ಬ್ಯಾಂಕಿನಲ್ಲಿ ಅಡವಿಟ್ಟು ನಾವುಗಳು ಅದರ ಮೇಲೆ ಯಾವುದೇ ಸಾಲವನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಗೆ ಈಗ ಸದರಿ ಭೀಮಣ್ಣ ಇವರು ಸದರಿ 9 ಎಕರೆ ಜಮೀನಿನ ಮಾಲಿಕರಾಗಿದ್ದು ಅದನ್ನು 5 ಮತ್ತು 6 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳಿದ್ದಕ್ಕೆ ಸಾಕ್ಷಿ ತಮಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ಪಹಣಿಗಳಲ್ಲಿ 5 ಮತ್ತು 6 ನೇ ಪ್ರತಿವಾದಿಗಳ ಹೆಸರು ಬರುತ್ತಿರುವುದಕ್ಕೆ ನೀವು ಎಲ್ಲಿಯಾದರೂ ಪ್ರಶ್ನೆ ಮಾಡಿರುತ್ತೀರಾ ಎಂದು ಕೇಳಿದ್ದಕೆ ಸಾಕ್ಷಿ ತಮಗೆ ಗೊತ್ತಿರುವುದಿಲ್ಲ ಹಾಗೂ ಮಾಡಿರುವುದಿಲ್ಲ ಎಂದು ಹೇಳುತ್ತಾರೆ.

6. 1 ನೇ ವಾದಿ ಯಾದಗಿರಿ ತಾಲೂಕಿನಾ ಹೆಗ್ಗಣಗೇರಾ ಗ್ರಾಮದಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. ನಾನು ಹಾಗೂ 2 ನೇ ವಾದಿ ಹಾಲಗೇರಾ ಗ್ರಾಮದಲ್ಲಿ ವಾಸ ಮಾಡುತ್ತೇವೆ ಎಂದರೆ ನಾನು ಸದರಿ ಗ್ರಾಮದಲ್ಲಿ ವಾಸ ಮಾಡುವುದಿಲ್ಲ. ನಾನು ಶಿವನೂರು ಗ್ರಾಮದಲ್ಲಿ ವಾಸ ಮಾಡುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಶಿವನೂರು ಗ್ರಾಮದಲ್ಲಿ ಹುಟ್ಟಿರುವುದಿಲ್ಲ ಹಾಗೂ ಅಲ್ಲಿ ಬೆಳೆದಿರುವುದಿಲ್ಲ ಹಾಗೂ ಸದರಿ ಊರಿಗೂ ಹಾಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಭೀಮಣ್ಣ ಇವರ ತಾಯಿಗೆ ಅಜಾರಿಯಾಗಿರುತ್ತದೆ ಎಂದರೆ ಸರಿ. ಸದರಿ ಭೀಮಣ್ಣ ಇವರು ತಮ್ಮ ಪ್ರಾಪಂಚಿಕ ಅಡಚಣೆಗಾಗಿ 9 ಎಕರೆ ಜಮೀನಿನಲ್ಲಿ 5 ಎಕರೆ ಜಮೀನನ್ನು 5 ಮತ್ತು 6 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

7. ನಮ್ಮ ವಾದ ಪತ್ರವನ್ನು ತಯಾರಿಸಲು ಅದರ ಮಾಹಿತಿಯನ್ನು ನಮ್ಮ ಮಾನ್ಯ ವಕೀಲರಿಗೆ ಯಾರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

8. 1 ನೇ ಪ್ರತಿವಾದಿಯು ಅನೈತಿಕ ಸಂಬಂಧವನ್ನು ಹೊಂದಿದ್ದ ಕಾರಣಕ್ಕಾಗಿ ಸದರಿ ಭೀಮಣ್ಣ ಇವರ ಕೊಲೆ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮೇಲೆ ಸಳ್ಳಾದ ಆಪಾದನೆಯನ್ನು ಮಾಡಲು ಅವರು ಅನೈತಿಕ ಸಂಬಂದ ಹೊಂದಿದ್ದರಿಂದ ಸದರಿ ಭೀಮಣ್ಣ ಇವರ ಕೊಲೆ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. 1 ನೇ ಪ್ರತಿವಾದಿಗೆ ಈಗ ಎಷ್ಟು ಎಕರೆ ಜಮೀನು ಉಳಿದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಉಳಿದ ಜಮೀನಿಗೆ 1 ರಿಂದ 4 ನೇ ಪ್ರತಿವಾದಿಗಳು ನಿರೂಪಾದಿಕ ಮಾಲಿಕರಾಗಿದ್ದು ಅದರ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ 5 ಎಕರೆ ಜಮೀನಿಗೆ 6 ನೇ ಪ್ರತಿವಾದಿಯೇ ಮಾಲಿಕರು ಆಗಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯು ಸದರಿ 5 ಎಕರೆ ಜಮೀನನ್ನು ಉಳಿಮೆ ಮಾಡುತ್ತಿದ್ದು ಹಾಗೂ ಅದರ ಮೇಲೆ ಸಾಲವನ್ನು ಪಡೆದುಕೊಂಡಿರುವ ವಿಚಾರ ನನಗೆ ತಿಳಿದಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಹಾಗೂ 1 ಮತ್ತು 2 ನೇ ವಾದಿಗಳಿಗೆ ದಾವಾ ಜಮೀನಿನ ಮೇಲೆ ಯಾವುದೆ ಹಕ್ಕು ಭಾದ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.